

## ಸೋನಂ ನೋವು

ಬಾಲಿವುಡ್‌ನಲ್ಲಿ ನಟ ಅಥವಾ ನಟಿ ಎಷ್ಟೇ ಉತ್ತಮ ಅನಯ ನೀಡಿದ್ದರೂ ಅಭಿಮಾನಿಗಳ ಪಾಲಿಗೆ ಅವರು ಕಾಣಿಸುವುದು ಸ್ಟೈಲಿಶ್ ಐಕಾನ್‌ಗಳಾಗಿ. ಪ್ರತಿ ಕಲಾವಿದನೂ ತನ್ನದೇ ವಿಶಿಷ್ಟ ಶೈಲಿ ಅಥವಾ ಮ್ಯಾನರಿಸಂ ಹೊಂದಿರಬೇಕು ಮತ್ತು ಆತನ ಬಾಹ್ಯ ಚಹರೆಯಲ್ಲಿ ಆಗಾಗ್ಗೆ ಹೊಸ ಪ್ರಯೋಗಗಳಾಗುತ್ತಿರಬೇಕು. ಇದರಲ್ಲಿ ಕಲಾವಿದರ ನಡುವೆಯೇ ಪೈಪೋಟಿ ಇರುವುದಿದೆ. ನಟಿಯರ ಜಗತ್ತಿನಲ್ಲಿ ಇದು ತುಸು ವಿಭಿನ್ನ. ಹೊಸ ಫ್ಯಾಶನ್ ಟ್ರೆಂಡ್ ಸೃಷ್ಟಿಸುವುದರಲ್ಲಿ ನಟಿಯರ ಪಾಲೇ ಹಿರಿದು.

ಸಿನಿಮಾದ ಸೋಲು ಗೆಲುವಿನ ಲೆಕ್ಕಾಚಾರದಲ್ಲಿ ಸೋನಂ ಕಪೂರ್ ತಕ್ಕಡಿ ಎಂದಿಗೂ ಸಮತೂಕದಲ್ಲಿರುತ್ತದೆ. ಆದರೆ ಆಕೆಗೆ ಅಪಾರ ಅಭಿಮಾನಿಗಳಿದ್ದಾರೆ. ಈ ಅಭಿಮಾನಿಗಳ ಪೈಕಿ ಸಿಂಹಪಾಲು ಆಕೆಯ ಫ್ಯಾಶನ್ ಅಭಿಮಾನಿಗಳು.

ಹೊಸ ವಿನ್ಯಾಸಕ್ಕಾಗಿ ನಟಿಯರು ವಿನ್ಯಾಸಕಾರರ ಮೊರೆ ಹೋಗುತ್ತಾರೆ. ಇಲ್ಲಿ ಚೆನ್ನಾಗಿ ಕಾಣಿಸಿಕೊಳ್ಳಬೇಕು ಎನ್ನುವುದಕ್ಕಿಂತ ಇತರ ನಟಿಯರಿಗಿಂತ ವಿಭಿನ್ನ ಹಾಗೂ ಸುಂದರವಾಗಿ ಕಾಣಿಸಿಕೊಳ್ಳಬೇಕು ಎಂಬ ಪೈಪೋಟಿಯೇ ಮೇಲು. ಆದರೆ ಸೋನಂ ಇದಕ್ಕಾಗಿ ಹಣ ವ್ಯಯಿಸುವುದಿಲ್ಲವಂತೆ. ತನ್ನ ವಿನ್ಯಾಸವನ್ನು ತಾನೇ ಮಾಡಿಕೊಳ್ಳುವುದು ಆಕೆಯ ರೂಢಿ. ಇದು ಕೆಲವು ನಟಿಯರ ಹೊಟ್ಟೆಕಿಚ್ಚಿಗೂ ಕಾರಣವಾಗಿದೆಯಂತೆ.

'ಅನೇಕ ನಟಿಯರು ಈ ಕಾರಣಕ್ಕೆ ನನಗೆ ಬೈಯ್ದಿದ್ದಾರೆ. ಒಬ್ಬ ದೊಡ್ಡ ನಟಿಯಂತೂ, ಸೋನಂ ಇದನ್ನು ನೀನೇಕೆ ಮಾಡಿಕೊಂಡಿದ್ದಿ? ನಿನಗೆ ಗೊತ್ತೇ, ನನ್ನ ವಿನ್ಯಾಸಕಾರನಿಗೆ ಎಷ್ಟು ಹಣ ಕೊಡುತ್ತೇನೆ ಎಂದು? ಎಂಬುದಾಗಿ ಪ್ರಶ್ನಿಸಿದ್ದರು' ಎಂದು ಸೋನಂ ಹೇಳಿಕೊಂಡಿದ್ದಾಳೆ. 'ಚೆಂದ ಕಾಣಿಸಿಕೊಳ್ಳಬೇಕೆಂದು ನಾನು ಹಣ ಖರ್ಚು ಮಾಡುವುದಿಲ್ಲ. ನನ್ನ ಸಹೋದರಿ ಅಲಂಕಾರ ಮಾಡುತ್ತಾಳೆ ಅಥವಾ ನಾನೇ ಅದನ್ನು ಮಾಡಿಕೊಳ್ಳುತ್ತೇನೆ. ಇಲ್ಲಿ ನೀವು ನೀವಾಗಿಯೇ ಇರಬೇಕು' ಎಂದು ತನ್ನನ್ನು ಟೀಕಿಸಿದ ನಟಿಯರತ್ತ ಚಾಟಿ ಬೀಸಿದ್ದಾಳೆ ಸೋನಂ.

ತನ್ನನ್ನು ಅನೇಕರು 'ಫ್ಯಾಷನಿಸ್ಟ್' ಎಂದು ಕರೆಯುತ್ತಾರೆ. ಆದರೆ ಅದು ಇಷ್ಟವಾಗುವುದಿಲ್ಲ. 'ಸ್ಟೈಲಿಶ್' ಎಂದು ಕರೆದರೆ ಖುಷಿಯಾಗುತ್ತದೆ ಎಂದಿದ್ದಾಳೆ ಆಕೆ. ತನ್ನ ಸ್ಟೈಲ್ ಕುರಿತು ಬೈದಿದ್ದ ದೊಡ್ಡ ನಟಿ ಯಾರೆಂದು ಮಾತ್ರ ಸೋನಂ ಅಪ್ಪಿತಪ್ಪಿಯೂ ಹೇಳಲಿಲ್ಲ.



## ನರ್ಗಿಸ್ ವಿವಾದ

ನರ್ಗಿಸ್ ಫಖ್ರಿ ನೆರೆಯ ದೇಶ ಪಾಕಿಸ್ತಾನದಲ್ಲಿಯೂ ಸುದ್ದಿಯಾಗಿದ್ದಾಳೆ. ನರ್ಗಿಸ್ ರೂಪದರ್ಶಿಯಾಗಿರುವ ಜಾಹೀರಾತೊಂದು ಅಲ್ಲಿನ ಸಾಮಾಜಿಕ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ತೀವ್ರ ಚರ್ಚೆ ಹುಟ್ಟುಹಾಕಿದೆ.

ಪಾಕ್ ಮೂಲದ ತಂದೆ ಮತ್ತು ಜೆಕ್ ಗಣರಾಜ್ಯದ ಅಮ್ಮನ ಮಗಳಾಗಿ ನ್ಯೂಯಾರ್ಕ್‌ನಲ್ಲಿ ಜನಿಸಿದ ನರ್ಗಿಸ್ ಹೆಸರು ಮಾಡಿದ್ದು ಬಾಲಿವುಡ್‌ನಲ್ಲಿ. ಇತ್ತೀಚೆಗೆ ಈಕೆ ಪಾಕಿಸ್ತಾನದ ಮೊಬೈಲ್ ಕಂಪೆನಿಯೊಂದರ ಜಾಹೀರಾತಿಗಾಗಿ ಕ್ಯಾಮೆರಾಕ್ಕೆ ಪೋಸು ನೀಡಿದ್ದಳು. ನರ್ಗಿಸ್ ಕೆಂಪನೆಯ ದಿರಿಸು ತೊಟ್ಟು ಕೈಯಲ್ಲಿ ಫೋನ್ ಹಿಡಿದು ಮಲಗಿಕೊಂಡ ಜಾಹೀರಾತು ಅಲ್ಲಿನ ಉರ್ದು ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿತ್ತು. ಇದು 'ಅಶ್ಲೀಲ' ಜಾಹೀರಾತು ಎಂದು ಸಂಪ್ರದಾಯವಾದಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಂತೂ ಪತ್ರಿಕೆ ಮತ್ತು ನರ್ಗಿಸ್ ವಿರುದ್ಧ ತೀವ್ರ ಟೀಕೆಗಳು ವ್ಯಕ್ತವಾಗಿವೆ. ನರ್ಗಿಸ್ ಅಶ್ಲೀಲವೆನಿಸುವ ಅಥವಾ ಪ್ರಚೋದನಾಕಾರಿ ಉಡುಪು ಧರಿಸಿಲ್ಲದಿದ್ದರೂ ಜಾಹೀರಾತು ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದರೆ, ಪ್ರತಿಯೊಂದರಲ್ಲೂ ಅಶ್ಲೀಲತೆ ಹುಡುಕುತ್ತಿದ್ದಾರೆ ಎಂದು ಸಂಪ್ರದಾಯವಾದಿಗಳ ವಿರುದ್ಧ ಪ್ರತಿ ಟೀಕೆ ವ್ಯಕ್ತವಾಗಿದೆ.

'ಅಯ್ಯೋ ಅದರಲ್ಲಿ ಇಷ್ಟು ಗದ್ದಲವೆಬ್ಬಿಸುವಂಥದ್ದು ಏನಿದೆ? ಒಂದು ಉತ್ಪನ್ನವನ್ನು ಪ್ರಚಾರ ಮಾಡುವ ವಿಭಿನ್ನ ಮತ್ತು ಸೃಜನಾತ್ಮಕ ಜಾಹೀರಾತು ಅಷ್ಟೇ' ಎಂದು ಟ್ವೀಟ್ ಮಾಡಿ ಅಚ್ಚರಿ ವ್ಯಕ್ತಪಡಿಸಿದ್ದಾಳೆ ನರ್ಗಿಸ್. ತನ್ನನ್ನು ಹಾಗೂ ಮೊಬೈಲ್ ಕಂಪೆನಿಯನ್ನು ಆಕೆ ಸಮರ್ಥಿಸಿಕೊಂಡಿದ್ದಾಳೆ. ಈ ಜಾಹೀರಾತು ಪ್ರಕಟವಾಗುವುದಕ್ಕೂ ಮುನ್ನ ಆಕೆ 'ಪಾಕಿಸ್ತಾನದಲ್ಲಿನ ನನ್ನ ಎಲ್ಲಾ ಅಭಿಮಾನಿಗಳಿಗೂ ಅಚ್ಚರಿ ಕಾದಿದೆ' ಎಂದು ಟ್ವೀಟ್ ಮಾಡಿದ್ದಳು. ಹಾಗಾದರೆ ಈ ರೀತಿಯ ವಿವಾದ ಸೃಷ್ಟಿ ಅಥವಾ ಪ್ರಚಾರ ದೊರಕಲಿದೆ ಎಂಬುದು ಆಕೆಗೆ ಮೊದಲೇ ತಿಳಿದಿತ್ತೇ.. ಎನ್ನುವುದು ಹಲವರ ಪ್ರಶ್ನೆ.

■ ಅಮಿ